ಶ್ರೀ ಎಂ. ನಾಗಪ್ಪ.—ಉತ್ತರದಲ್ಲಿ ಇರ್ರೆಗ್ಯುಲ್ಯಾರ್‌ಟೀಸ್ ಇದ್ದರೆ ಮಾತ್ರ ಆಡಿಟ್ ರಿಪೋರ್ಟನ್ನು ಈ ಸಭೆಯ ಟೇಬಲ್ ಮೇಲೆ ಇಡುತ್ತೇನೆಂದು ಹೇಳಿದ್ದಾರೆ. ಈಗ ಉಪ ಪ್ರಶ್ನೆಯಲ್ಲಿ ಯಾವುದೂ ಅಂತಹ ಪ್ರಶ್ನೆ ಇಲ್ಲವೆಂದು ಹೇಳುತ್ತೀರಿ. ಆದ್ದರಿಂದ ತಾವು ಕೊಟ್ಟಿರುವ ಉತ್ತರವನ್ನು ಸತ್ಯಕ್ಕೆ ದೂರವಾದಂಥಾದ್ದು ಎಂಬುದಾಗಿ ಭಾವಿಸಬೇಕೋ ಅಥವಾ ತಾವು ಈ ಸಭೆಯಲ್ಲಿ ಈ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡುತ್ತಾ ಇಲ್ಲವೆಂದು ಭಾವಿಸಬೇಕೋ ?

ಶ್ರೀ ಬಿ. ಎಲ್. ಗೌಡ.—1967-68, 1968-69, 1969-70ನೇ ಸಾಲುಗಳ ಆಡಿಟ್ ವರದಿಗಳನ್ನು ಈ ಸಭೆಯ ಮುಂದೆ ಮಂಡಿಸುತ್ತೀರಾ ಎಂದು ಕೇಳಿದ್ದಾರೆ. Regarding Irregularities and misappropriation, I have already stated that I am going to place a copy of the Audit report on the Table of the House.

ಶ್ರೀ ಕೆ. ಎಸ್. ನಾಗರತ್ನಮ್ಮ.—ಗುಂಡ್ಲುಪೇಟೆ ಸೊಸೈಟಿಯು ಲೆಕ್ಕಗಳನ್ನು ಆಡಿಟ್ ಮಾಡಿದಾಗ ಒಂದು ಸಾರಿ 2½ ಲಕ್ಷ ಕಡಿಮೆಯಾಗಿದೆ, ಇನ್ನೊಂದುಸಾರಿ ಆಡಿಟ್ ಮಾಡಿದಾಗ 1½ ಲಕ್ಷ ಕಡಿಮೆಯಾಗಿದೆ. ಮತ್ತೊಂದು ಸಾರಿ ಆಡಿಟ್ ಮಾಡಿಸಿದಾಗ ಒಂದು ಲಕ್ಷ ಕಡಿಮೆಯಾಗಿದೆ. ಆದ್ದರಿಂದ ಆಡಿಟ್ ರಿಪೋರ್ಟ್‌ನ್ನು ಬಹಿರಂಗಪಡಿಸುವುದಕ್ಕೆ ಏನಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಇದು ತಾಲ್ಲೂಕು ಅಭಿವೃದ್ಧಿಮಂಡಲಿಗೆ ಸಂಬಂಧಪಟ್ಟ ಪ್ರಶ್ನೆ. ಮಾನ್ಯ ಸದಸ್ಯರು ಗುಂಡ್ಲುಪೇಟೆ ಮಾರ್ಕೆಟಿಂಗ್ ಸೊಸೈಟಿಯ ವಿಷಯವಾಗಿ ಹೇಳುತ್ತಿದ್ದಾರೆ.

Effecting repairs to Talikote-Veerapur Road

235. **Sri S. M. GUREDDY** (Muddebihal).—

Will the Minister for Public Works be pleased to state :—

(*a*) whether it has come to their notice that due to not effecting repairs to Talikote-Veerapura road the buses have stopped plying ;

(*b*) if so the steps taken by them to effect repairs to the road ?

Sri BASAVARAJ MAGAVI (Deputy Minister for Public Works).—

(*a*) The Government have noticed that the buses do not ply only during the rainy season.

(*b*) Will be considered.

ಶ್ರೀ ಎಸ್. ಎಂ. ಗುರೆಡ್ಡಿ.—ಫೆಬ್ರವರಿ, ಮಾರ್ಚ್, ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಈ ರಸ್ತೆಯನ್ನು ರಿಪೇರಿ ಮಾಡುವ ಕ್ರಮವನ್ನು ಯಾವರೀತಿಯಾಗಿ ಹಾಕಿಕೊಂಡಿದ್ದೀರಿ ?

ಶ್ರೀ ಬಿ. ವಿ. ಮಾಗಾವಿ.—ಈ ರಸ್ತೆಯನ್ನು ಪಿ. ಡಬ್ಲ್ಯೂ. ಡಿ. ಯವರು ಅವರ ವಶಕ್ಕೆ ತೆಗೆದುಕೊಂಡಿದ್ದು ನಿಜ. ಈ ರಸ್ತೆಯನ್ನು ಈಗಾಗಲೇ ಸಾಕಷ್ಟು ರಿಪೇರಿ ಮಾಡಿದ್ದೇವೆ. 1970-71ನೇ ಬಡ್ಜೆಟ್ಟಿನಲ್ಲಿ ಎರಡೂವರೆ ಲಕ್ಷ ರೂಪಾಯಿಗಳನ್ನು ಸಂಪೂರ್ಣವಾಗಿ ಈ ರಸ್ತೆಯ ರಿಪೇರಿ ಮಾಡುವುದಕ್ಕೆ ಮಂಜೂರು ಕೊಟ್ಟಿದ್ದೇವೆ. ಇಷ್ಟಲ್ಲದೆ ಫ್ಯಾಮಿನ್ ರಿಲೀಫ್‌ನಲ್ಲಿಯೂ ಕೂಡ 1967-68 ಮತ್ತು 1968-69ನೇ ಸಾಲುಗಳಲ್ಲಿ 2 ಕೋಟಿ 37 ಲಕ್ಷ 667 ಸಾವಿರ ರೂಪಾಯಿಗಳನ್ನೂ 1969-70ನೇ ಸಾಲಿನಲ್ಲಿ 23,675 ರೂಪಾಯಿಗಳನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ ಕೊಟ್ಟಿದ್ದೇವೆ. ಈ ವರ್ಷದ ಬಡ್ಜೆಟ್ಟಿನಲ್ಲಿ 18 ಸಾವಿರ ರೂಪಾಯಿಗಳನ್ನು ಈ ರಸ್ತೆಗಾಗಿ ವ್ಯಯ ಮಾಡಬೇಕೆಂದು ಸರ್ಕಾರದ ಉದ್ದೇಶವಿದೆ.

ಶ್ರೀ ಬಾಪೂ ಗೌಡ.—ಈ ರಸ್ತೆ ಇಂಟರ್‌ಸ್ಟೇಟ್ ರಸ್ತೆಯಲ್ಲದೆ ವಿಜಾಪುರ ಮತ್ತು ಗುಲ್ಬರ್ಗಾ ಹಾಗೂ ಸೋಲಾಪುರಕ್ಕೆ ಲಿಂಕ್ ಆಗುತ್ತದೆ. ಇದರ ಮೇಲೆ ಹೆಚ್ಚಿಗೆ ಬಸ್ಸುಗಳು ಓಡಾಡುವುದರಿಂದ, ಈ ರಸ್ತೆಗೆ ಹೆಚ್ಚು ಖರ್ಚುಮಾಡಿ ಅದನ್ನು ಜಾಗ್ರತೆಯಾಗಿ ಸರಿಪಡಿಸುತ್ತೀರಾ ?

ಶ್ರೀ ಬಿ. ಎ. ಮಾಗಾವಿ.—ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳು ಮೈಸೂರು ಸಂಸ್ಥಾನದಲ್ಲಿರುವುದರಿಂದ ಅದು ಇಂಟರ್ ಸ್ಟೇಟ್ ರೋಡ್ ಆಗುವುದಿಲ್ಲ. ಇದು ಬಿಜಾಪುರ ಮತ್ತು ಗುಲ್ಬರ್ಗಾಕ್ಕೆ ಷಾರ್ಟ್‌ಕಟ್ ಆಗುತ್ತದೆ. ಇದರ ರಿಪೇರಿಗಾಗಿ ಈಗಾಗಲೇ ಸಾಕಷ್ಟು ಹಣ ವ್ಯಯಮಾಡಿದ್ದೇವೆ. ಅಲ್ಲಿ ರಸ್ತೆ ರಿಪೇರಿ ಮಾಡುವುದು ಬಹಳ ಕಷ್ಟವಾದುದೆಂದು ಮಾನ್ಯ ಸದಸ್ಯರಿಗೇ ಗೊತ್ತಿದೆ.

ಶ್ರೀ ನಡಾಶಿವಪ್ಪ ಪಾಟೀಲ್—ಮಳೆಗಾಲದಲ್ಲಿ ಮಾತ್ರ ಬಸ್ಸುಗಳು ಅಲ್ಲಿ ಓಡಾಡುವುದಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ನಾಲ್ಕಾರು ವರ್ಷಗಳಿಂದ ಮಾನ್ಯ ಸದಸ್ಯರಾದ ಶ್ರೀ ತಮ್ಮಯ್ಯನವರು ಇವ್ವಾರೆ. ಅವರೂ ಸಹ ತಮ್ಮ ಗಮನಕ್ಕೆ ತಂದಿದ್ದಾರೆ. ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ. 6 ತಿಂಗಳೊಳಗೆ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೀರಿ. ಅಂದಮೇಲೆ ಅದನ್ನು ಪರಿಶೀಲನೆಮಾಡುವುದಕ್ಕೆ ಇನ್ನೆಷ್ಟು ವರ್ಷಗಳು ಬೇಕು? ಈ ರಸ್ತೆಯನ್ನು ರಿಪೇರಿ ಮಾಡುವುದಕ್ಕೆ ಇನ್ನೆಷ್ಟು ವರ್ಷಗಳು ಬೇಕಾಗುತ್ತವೆ?

ಶ್ರೀ ಬಿ. ಎ. ಮಾಗಾವಿ.—ಪರಿಶೀಲನೆಯಾಗುವುದು ಎಂದು ಉತ್ತರದಲ್ಲಿದೆ. ಆ ರೀತಿ ಪರಿಶೀಲಿಸಿದ ಮೇಲೆ ರಸ್ತೆಗಳ ಮೇಲೆ ಎಷ್ಟೆಷ್ಟು ವ್ಯಯಮಾಡಿದೆಯೆಂದು ಹೇಳುತ್ತೇವೆ. ಮಾನ್ಯ ಸದಸ್ಯರಾದ ಶ್ರೀ ಗುರೆಡ್ಡಿಯವರಿಗೆ ಹೇಳಬೇಕೆಂದರೆ, ಎಲ್ಲಾ ರಸ್ತೆಗಳನ್ನು 5 ವರ್ಷಗಳೊಳಗೆ ಮಾಡಬೇಕೆಂದು ಆತುರವಿದೆ. ಹಣದ ಅಭಾವದ ದೃಷ್ಟಿಯಿಂದ ಅದು ಸ್ವಲ್ಪ ಕಷ್ಟವಾಗುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ನಾನು ಕೇಳುತ್ತಿರುವುದು ಇದು ಮೊದಲನೆಯ ಸಲವಲ್ಲ. ಹಿಂದೆ ಇದ್ದಂತಹ ಸಿದ್ಧಾಂತಿಯವರೂ ಕೇಳಿಕೊಂಡು ಬಂದಿದ್ದಾರೆ. ಬರಗಾಲದ ಸಮಯದಲ್ಲಿ ಖರ್ಚಾದಂತಹ ಹಣದಲ್ಲಿ ರಸ್ತೆಗಳ ರಿಪೇರಿ ಕೂಡ ಆಗಿಲ್ಲ. ತಾವು ಹೇಳುತ್ತಿದ್ದೀರಿ, ಬಜೆಟ್ಟಿನಲ್ಲಿ ಸೇರಿಸಿದೆ ಎಂದು. ಬಜೆಟ್ ಏಪ್ರಿಲ್‌ನಲ್ಲಿ ಮುಗಿದಿದೆ. ಅದ್ದರಿಂದ ಇಲ್ಲಿಯವರೆಗೆ ಬಜೆಟ್ಟಿನಿಂದ ಎಷ್ಟು ಹಣ ಖರ್ಚು ಮಾಡಿದ್ದೀರಿ?

ಶ್ರೀ ಬಿ. ಎ. ಮಾಗಾವಿ.—ಬಜೆಟ್ ಆದಮೇಲೆ ಪ್ರಿಂಟ್‌ನಲ್ಲಿ ಬಿಜಾಪುರ ಬೀಳುವ ಬದಲು ಕೋಲಾರ ಬಿದ್ದಿದೆ. ನಂತರ ಅದನ್ನು ನಿಪಡಿಸಿಕೊಂಡಿದ್ದೇವೆ. ಸರ್ಕಾರದ ಉದ್ದೇಶ ಇದನ್ನು ಮಾಡಬೇಕೆಂದೇ ಅಲ್ಲವೆ, ಮಾಡಬಾರದು ಎಂದು ಇಲ್ಲ. ಕಾರಣಾಂತರಗಳಿಂದ ಇದನ್ನು ಮುಂದು ವರಿಸಬೇಕೆಂದೇನೂ ಇಲ್ಲ. ಅದನ್ನು ಪರಿಶೀಲನೆಯಾಗುವುದು.

Providing Houses to Scheduled Castes/Scheduled Tribes

343. **Sri R. G. WALI** (Hubli).—

Will the Minister for Social Welfare be pleased to state:—

(*a*) whether there is any special programme of providing houses to the Scheduled Castes/Scheduled Tribes people;

(*b*) the nature of any other help given to such people?

Smt. BASAVARAJESWARI (Deputy Minister for Social Welfare and Minor Irrigations).—

(*a*) Yes.

(i) Scheme for the grant of subsidy at Rs. 900 per house by the Social Welfare Department.

(ii) Scheme of sanction of loans by the Scheduled Castes and Scheduled Tribes Housing Corporation;

(iii) Scheme for payment of grant-in-aid to the Local Bodies for construction of houses to Sweepers and Scavengers.

(*b*) Other Schemes that are implemented for the benefit of the Scheduled Castes and Scheduled Tribes are detailed in the Annexure appended.